ಅಸಲು ದಾವಾ ಸಂಖ್ಯೆ **188/2018** ಪಿ .ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **05.01.2026.**

ಮು.ಪಾಟೀ ಸವಾಲು ಃ ಶ್ರೀ.ಬಿ.ಎಸ್. ನ್ಯಾಯಾವಾದಿಗಳಿಂದಃ

ವಾದ ಪತ್ರದ ಜೊತೆಗೆ ಹಾಜರು ಪಡಿಸಿರುವ ಮಾದರಿ ನಕ್ಷೆಯಲ್ಲಿ ಜಿ ಷೆಡ್ಯೂಲ್ ಸಿಮೆಂಟ್ ರಸ್ತೆಯ ಉತ್ತರಕ್ಕೆ ತೋರಿಸಿರುವ ರಾಮೇಗೌಡ ಮತ್ತು ಹೊನ್ನೆಗೌಡರ ಉಳಿಕೆ ಸ್ವತ್ತು ಎಂದು ತೋರಿಸಿರುವ ಸ್ವತ್ತು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಿ ಷೆಡ್ಯೂಲ್ ಸಿಮೆಂಟ್ ರಸ್ತೆಯ ದಕ್ಷಿಣಕ್ಕೆ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ.

2. ಸದರಿ ಜಿ ಷೆಡ್ಯೂಲ್ ಸಿಮೆಂಟ್ ರಸ್ತೆಯು ಎಷ್ಟು ಉದ್ದ ಮತ್ತು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಹೆಚ್ ಷೆಡ್ಯೂಲ್ ಸ್ವತ್ತು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ಐ ಷೆಡ್ಯೂಲ್ ಸ್ವತ್ತು ಎಷ್ಟು ಉದ್ದ ಮತ್ತು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಜೆ ಷೆಡ್ಯೂಲ್ ಸ್ವತ್ತು ಎಷ್ಟು ಉದ್ದ ಮತ್ತು ಅಗಲ ಇದೆ ಎಂದು ನನಗೆ ಗೊತ್ತಿಲ್ಲ. ಕೆ ಷೆಡ್ಯೂಲ್ ಸ್ವತ್ತು ಎಷ್ಟು ಉದ್ದ ಮತ್ತು ಅಗಲ ಇದೆ ಎಂದು ನನಗೆ ಗೊತ್ತಿಲ್ಲ.

3. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಎ ಷೆಡ್ಯೂಲ್ ಸ್ವತ್ತಿನಿಂದ ಕೆ ಷೆಡ್ಯೂಲ್ ಸ್ವತ್ತು ಸರ್ವೆ ಜಮೀನಿನಲ್ಲಿ ಮತ್ತು ಗ್ರಾಮಾಠಾಣಾ ಎರಡರಲ್ಲೂ ಇತ್ತು.

4. ಸದರಿ ಮಾದರಿ ನಕ್ಷೆಯಲ್ಲಿ ತೋರಿಸಿರುವಂತೆ ಜಿ , ಐ ಮತ್ತು ಜೆ ಷೆಡ್ಯೂಲ್ ರಸ್ತೆಗಳಿಗೆ ಸಂಬಂಧಿಸಿದಂತೆ ಪಾಲು ಪಾರಿಕತ್ತನ್ನು ಹಾಜರು ಪಡಿಸಿರುತ್ತೇನೆ. ಸದರಿ ಪಂಚಾಯಿತಿ ಪಾರಿಕತ್ತು ಸುಮಾರು 35-40 ವರ್ಷಗಳ ಹಿಂದೆ ಆಗಿರುತ್ತದೆ. ಪಂಚಾಯಿತಿ ಪಾರಿಕತ್ತು ಯಾರ ಯಾರ ನಡುವೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪಂಚಾಯಿತಿ ಪಾರಿಕತ್ತು ಆಗುವ ಮುಂಚೆ 1 ನೇ ಪ್ರತಿವಾದಿಗೆ ಸ್ವತ್ತನ್ನು ಮಾರಾಟ ಮಾಡಲಾಗಿತ್ತು. ಪಂಚಾಯಿತಿ ಪಾರಿಕತ್ತು ಆದ ನಂತರ ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆಯ ನಡುವೆ

ವಿಭಾಗವಾದ ನಂತರದಲ್ಲಿ 2 ನೇ ಪ್ರತಿವಾದಿಗೆ ನನ್ನ ಚಿಕ್ಕಪ್ಪ ತನ್ನ ಹಿಸ್ಸೆಗೆ ಬಂದ ಸ್ವತ್ತಿನಲ್ಲಿ ಮಾರಾಟ ಮಾಡಿರುತ್ತಾರೆ.

5. 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ಉಳಿಕೆ ಜಮೀನಿನನ್ನು ನನ್ನ ಚಿಕ್ಕಪ್ಪ ಮತ್ತು ನನ್ನ ತಂದೆ ಹಂಚಿಕೊಂಡಿರುತ್ತಾರೆ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಸಮನಾಗಿ ಸ್ವತ್ತನ್ನು ಹಂಚಿಕೆ ಮಾಡಿಕೊಂಡಿರುತ್ತಾರೆ, ಆದರೆ ಯಾರಿಗೆ ಎಷ್ಟು ಗುಂಟೆ ಹಂಚಿಕೆಯಾಗಿದೆ ಎಂದು ಗೊತ್ತಿಲ್ಲ. ಹಂಚಿಕೆಯಾದ ಪ್ರಕಾರ ನನ್ನ ತಂದೆಗೆ ಮತ್ತು ನನ್ನ ಚಿಕ್ಕಪ್ಪನಿಗೆ ಬಂದ ಸ್ವತ್ತುಗಳ ಚೆಕ್ಕು ಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ.

6. ಈ ದಾವೆಯನ್ನು ಸಲ್ಲಿಸುವ ಮುಂಚೆ 1 ಮತ್ತು 2 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ ಸ್ವತ್ತುಗಳಿಗೆ ಸಂಬಂಧಿಸಿದಂತೆ ನನ್ನ ಚಿಕ್ಕಪ್ಪನಾಗಲೀ, ನನ್ನ ತಂದೆಯಾಗಲೀ ಅಥವಾ ನಾವಾಗಲೀ ಯಾವುದೇ ತಕರಾರನ್ನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾವು ಮತ್ತು ಪ್ರತಿವಾದಿಗಳು ವಿಶ್ವಾಸದಿಂದ ಇದ್ದುದರಿಂದ ರಸ್ತೆಯಲ್ಲಿ ಓಡಾಡುತ್ತಿದ್ದೇವು ಎಂದು ನುಡಿಯುತ್ತಾರೆ.

7. ಈ ಮೇಲೆ ಹೇಳಿದ ಪಂಚಾಯಿತಿ ಪಾರಿಕತ್ತಿನಲ್ಲಿ ಮಾದರಿ ನಕ್ಷೆಯಲ್ಲಿ ತೋರಿಸಿರುವಂತೆ ಐ ಮತ್ತು ಜೆ ರಸ್ತೆಯು ಇರುವ ಬಗ್ಗೆ ನಮೂದು ಮಾಡಲಾಗಿರುತ್ತದೆ. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಎ ರಿಂದ ಕೆ ಷೆಡ್ಯೂಲ್ ಸ್ವತ್ತು ಅನ್ಯಕ್ರಾಂತ ಆಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1984-85 ರ ಸಾಲಿನಲ್ಲಿ ಅನ್ಯಕ್ರಾಂತ ಆಗಿರುವುದಾಗಿ ನುಡಿಯುತ್ತಾರೆ.

8. ನಿಪಿ.14 ರಂತೆ ಹಾಜರು ಪಡಿಸಿರುವ ಪೋಟೋದ ಬಲಭಾಗದಲ್ಲಿ ಕಾಣುವ ಹೆಂಚಿನ ಮನೆಯು 1 ನೇ ಪ್ರತಿವಾದಿಗೆ ಸೇರಿರುವ ಹಳೇಯ ಮನೆ ಎಂದರೆ ಸರಿ. ಸದರಿ ಮನೆಯ ಮುಂಭಾಗ ಇರುವ ಸ್ವತ್ತು 1 ನೇ ಪ್ರತಿವಾದಿಗೆ ಸೇರಿದ ಖಾಲಿ ನಿವೇಶನ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಅದು ರಸ್ತೆ ಆಗಿರುವುದಾಗಿ ನುಡಿಯುತ್ತಾರೆ. ಸದರಿ ಖಾಲಿ ನಿವೇಶನದಲ್ಲಿ ಸದರಿ ಮನೆಯ ಬಾಗಿಲಿಗೆ ಹೊಂದಿಕೊಂಡಂತೆ ನಿಡಿ.1, 3 ಮತ್ತು

4 ರ ಪೋಟೋದಲ್ಲಿ ಕಾಣುವಂತೆ ಬೊಡ್ರಸ್ ಕಲ್ಲುಗಳನ್ನು ಸಂಗ್ರಹಿಸಿದ್ದೆ ಎಂದರೆ ಸರಿಯಲ್ಲ. ಎಂ.ಎ 08/2019 ರಲ್ಲಿ ಆದ ಆದೇಶದ ನಂತರ ಸದರಿ ಜಾಗದಲ್ಲಿ ಸಂಗ್ರಹಿಸಿದ್ದ ಬೊಡ್ರಸ್ ಕಲ್ಲುಗಳನ್ನು ನಾನು ತೆರವುಗೊಳಿಸಿರುತ್ತೇನೆ ಎಂದರೆ ಸಾಕ್ಷಿಯು ತಾನು ಹೆಚ್ ಷೆಡ್ಯೂಲ್ ಸ್ವತ್ತಿನಲ್ಲಿ ಬೊಡ್ರಸ್ ಕಲ್ಲುಗಳನ್ನು ಸಂಗ್ರಹಿಸಿದ್ದೆ ಎಂದು ನುಡಿಯುತ್ತಾರೆ.

9. ಮಾದರಿ ನಕ್ಷೆಯಲ್ಲಿ ತೋರಿಸಿರುವ ಕೆ ಷೆಡ್ಯೂಲ್ ಸ್ವತ್ತು ನಮಗೆ ಸೇರಿರವುದಿಲ್ಲ ಎಂದರೆ ಸರಿಯಲ್ಲ. ಸದರಿ ಕೆ ಷೆಡ್ಯೂಲ್ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿ ಗ್ರಾಮಾಠಾಣಾ ಜಾಗದಲ್ಲಿ ಈಗ ತೋರಿಸಿದ ಪೋಟೋದಲ್ಲಿ ಕಾಣುವ ಗಿಲವ್ ಮಾಡಿರುವ ಹೊಸ ಮನೆಯನ್ನು ನಿರ್ಮಿಸಿರುತ್ತೇನೆ ಎಂದರೆ ಸರಿ, ಸಾಕ್ಷಿ ನೋಡಿ ಒಪ್ಪಿಕೊಂಡ ಸದರಿ ಪೋಟೋವನ್ನು ನಿಡಿ.9 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಮನೆಯನ್ನು ಕೆ ಷೆಡ್ಯೂಲ್ ಸ್ವತ್ತು ಮತ್ತು ಗ್ರಾಮಾಠಾಣಾ ಎರಡು ಜಾಗ ಸೇರಿಸಿ ಮನೆ ನಿರ್ಮಿಸಿರುವುದಾಗಿ ನುಡಿಯುತ್ತಾರೆ. ಸದರಿ ಮನೆಗೆ ಐ ಮತ್ತು ಜೆ ಷೆಡ್ಯೂಲ್ ರಸ್ತೆಯ ಮುಖಾಂತರ ಓಡಾಡುತ್ತಿದ್ದೇವೆ.

10. ದಾಖಲೆಗಳನ್ನು ಸೃಷ್ಟಿಸಿಕೊಂಡು ಗ್ರಾಮಾಠಾಣಾ ಜಾಗದಲ್ಲಿ ಸದರಿ ಮನೆಯನ್ನು ನಿರ್ಮಿಸಿರುವುದರಿಂದ ಅದನ್ನು ಪ್ರಶ್ನಿಸಿ 1 ನೇ ಪ್ರತಿವಾದಿ ಮತ್ತು ಅಶ್ವಥ್ ಚಾರ್ ರವರು ನಮ್ಮ ವಿರುದ್ದ ತಾಲ್ಲೂಕು ಕಾರ್ಯನಿರ್ವಾಹಕ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯು ಸಲ್ಲಿಸಿರುವುದಾಗಿ ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ದಾಖಲೆಗಳನು ಸೃಷ್ಟಿಸಿಕೊಂಡಿರುವುದಾಗಿ ನನಗೆ ನೀಡಿದ ದಾಖಲೆಗಳನ್ನು ವಜಾ ಗೊಳಿಸಿ ಅರ್ಜಿಯನ್ನು ಪುರಸ್ಕೃತಗೊಳಿಸಲಾಗಿತ್ತು ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸದರಿ ಆದೇಶದ ವಿರುದ್ದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಯಲ್ಲಿ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶವನ್ನು ತಡೆ ಹಿಡಿರುವುದಾಗಿ ನುಡಿಯುತ್ತಾರೆ.

11. ಮಾದರಿ ನಕ್ಷೆಯಲ್ಲಿ ತೋರಿಸಿರುವ ಕೆ ಷೆಡ್ಯೂಲ್ ಸ್ವತ್ತು ಮತ್ತು ನಿಡಿ.9 ರಲ್ಲಿ ಕಾಣುವ ಮನೆ ನಿರ್ಮಿಸಿರುವ ಸ್ವತ್ತು ನಮಗೆ ಸೇರಿಲ್ಲದೆ ಇದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

12. ಮಾದರಿ ನಕ್ಷೆಯಲ್ಲಿ ತೋರಿಸಿರುವ ಪಶ್ಚಿಮ ದಿಕ್ಕಿನಲ್ಲಿರುವ ನಾರಾಯಣ ಚಾರ್ ರವರ ಸ್ವತ್ತಿಗೆ ಹೊಂದಿಕೊಂಡಂತೆ ಜಿ ಷೆಡ್ಯೂಲ್ ಸಿಮೆಂಟ್ ರಸ್ತೆಯಿಂದ ದಕ್ಷಿಣಾಕಾದಂತೆ ತಿರುಗಾಡಲು 4 ಅಡಿ ಅಗಲದ ಗಲ್ಲಿ ಇದೆ ಎಂದರೆ ಸರಿಯಲ್ಲ.

13. ಈಗ ತೋರಿಸಿದ ಪೋಟದಲ್ಲಿ ಕಾಣುವಂತೆ ಈ ಮತ್ತು ಹೆಚ್ ಸ್ವತ್ತುಗಳನ್ನು ಪ್ರತ್ಯೇಕಿಸುವಂತೆ ಕಲ್ಲು ಕಂಬಗಳನ್ನು ನೆಡಲಾಗಿತ್ತು ಎಂದರೆ ಸರಿ, ಸಾಕ್ಷಿ ನೋಡಿ ಒಪ್ಪಿಕೊಂಡು ಪೋಟೋವನ್ನು ನಿಡಿ.10 ಎಂದು ಗುರುತಿಸಲಾಯಿತು.

14. ನಾರಾಯಣ ಚಾರ್ ಸ್ವತ್ತಿಗೆ ಹೊಂದಿಕೊಂಡಂತೆ ತಿರುಗಾಡಲು 4 ಅಡಿ ಗಲ್ಲಿ ಇದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಅವರಿಗೆ ಸೇರಿದ ಸ್ವತ್ತನ್ನು ಅಕ್ರಮವಾಗಿ ಹೊಂದುವ ದುರುದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ಪಂಚಾಯಿತಿ ಪಾರಿಕತ್ತು ಮತ್ತು ಕ್ರಯ ಪತ್ರಗಳಲ್ಲಿ ಆಗಿದ್ದ ಕೈ ತಪ್ಪುಗಳನ್ನು ಪಂಚಾಯಿತಿಯಲ್ಲಿ ಸರಿ ಪಡಿಸಿಲಾಗಿರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿಗಳೇ ಅವುಗಳನ್ನು ತಿದ್ದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಐ ಮತ್ತು ಜೆ ರಸ್ತೆಯು ಅಸ್ಥಿತ್ವದಲ್ಲಿ ಇಲ್ಲದೆ ಇದ್ದರೂ ಸಹ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಐ ಮತ್ತು ಜೆ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಹಾಗೂ ಸದರಿ ಸ್ವತ್ತಿನಲ್ಲಿ ನಾನು ಯಾವತ್ತು ರಸ್ತೆಯಾಗಿ ಉಪಯೋಗಿಸಿಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

1 ನೇ ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ